

ಇರುವಿಕೆಯಿಂದ ನೀಗಿಸಿಕೊಂಡಿದ್ದರು. ಸ್ವಂತ ಮಗಳಂತೆ ಪ್ರೀತಿ ತೋರುತ್ತಿದ್ದರು. ರಜೆಯ ವೇಳೆ ಮಹೇಶ ವಿನಾಯಕನ ಜೊತೆ ಆಗಾಗ ಅವನ ಊರಿಗೆ ಹೋದಾಗ ಚಿಗರೆ ಕಂಗಳ ಚೆಲುವೆ ಪೂಜಾ ಅವನನ್ನು ಸೆಳೆದಿದ್ದಳು. ಮಹೇಶನ ಕಂಡರೆ ಪದವಿ ಮುಗಿಸಿದ್ದ ಪೂಜಾಳಿಗೂ ಪ್ರೀತಿ. ಮುಂದೆ ವಿನಾಯಕ ಎಂ.ಎಸ್. ಮುಗಿಸಿದ ನಂತರ ಒಂದೆರಡು ವರ್ಷಗಳು ಬೇರೆ ಕಡೆ ಪ್ರಾಕ್ಟೀಸ್ ಮಾಡಿ ನಂತರ ನಗರದಲ್ಲಿ ಸ್ವಂತ ಆಸ್ಪತ್ರೆ ತೆರೆದರೆ, ಮಹೇಶನೂ ಸ್ವಂತ ವಕೀಲ ವೃತ್ತಿ ಪ್ರಾರಂಭಿಸಿದ. ಮಹೇಶ ಹಾಗೂ ಪೂಜಾಳ ಮದುವೆ ಮಾತುಕತೆ ನಡೆಯಿತು. ಎರಡೂ ಮನೆಯವರೂ ತುಂಬು ಮನದಿಂದ ಒಪ್ಪಿದಾಗ ಪೂಜಾ ಮಹೇಶನ ಮಡದಿಯಾಗಿ ಅವನ ಮನೆ ಸೇರಿದಳು.

ತುಂಬಾ ಆತ್ಮೀಯ ಸ್ವಭಾವದ ಪೂಜಾ ಬೇಗನೆ ಮಹೇಶನ ಮನೆಯಲ್ಲಿ ಹೊಂದಿಕೊಂಡಳು. ಮಹೇಶ ಆಗಾಗ ಕೋರ್ಟ್ ಕೇಸ್‌ಗಳಿಗಾಗಿ ಬೆಂಗಳೂರು, ಧಾರವಾಡ, ದೆಹಲಿಗೆ ಹೋಗಬೇಕಾಗುತ್ತಿದ್ದರಿಂದ ಅವನ ತಾಯಿ ಗಿರಿಜಮ್ಮ ಪೂಜಾಳ ಜೊತೆಗೆ ಇರಲು ಬಂದರು. ಮಹೇಶನ ತಂದೆ ಊರಲ್ಲಿ ಇರುತ್ತಿದ್ದರು. ಯಾವಾಗಲಾದರೂ ಮಹೇಶನಲ್ಲಿಗೆ ಬಂದು ಹೋಗುತ್ತಿದ್ದರು. ಹೀಗೆಯೇ ಸಂತೋಷದ ಜೀವನದಲ್ಲಿ ಇನ್ನಷ್ಟು ಆನಂದ ಮೂಡಿಸಿದ್ದು ಮದುವೆಯಾಗಿ ಎರಡು ವರ್ಷದ ನಂತರ ಬಂದ ಮಗ ಅಥರ್ವ. ಮಹೇಶ ಹಾಗೂ ಪೂಜಾಳಿಗೆ ಅವನೊಡನೆ ಆಟವಾಡುತ್ತಿದ್ದರೆ ಸಮಯದ ಪರಿವೆಯೇ ಇರುತ್ತಿರಲಿಲ್ಲ. ಗಿರಿಜಮ್ಮಗಂತೂ ಮೊಮ್ಮಗನೊಡನೆ ಆಟವಾಡುತ್ತಾ ಕಾಲ ಸರಿದಿದ್ದೇ ಗೊತ್ತಾಗುತ್ತಿರಲಿಲ್ಲ.

ಇಂತಹ ಚಂದದ ಸಂಸಾರದಲ್ಲಿ ಚಂಡಮಾರುತದಂತೆ ಬಂದದ್ದೆ ಪೂಜಾಳ ಈ ಕಾರ್ಡಿಯಾಕ್ ಅನಾರೋಗ್ಯ. ಐದು ವರ್ಷದ ದಾಂಪತ್ಯದಲ್ಲಿ ಒಮ್ಮೆಲೇ ಇಂತಹ ಘೋರ ಘಟನೆ ನೆನೆದು ಹಿಂದಿನ ದಿನಗಳ ನೆನಪಿಗೆ ಜಾರಿದ್ದ ಮಹೇಶ.

'ಆಪರೇಶನ್ ಆಯಿತು. ಮೇಡಮ್‌ರನ್ನು ಐಸಿಯುಗೆ ಶಿಫ್ಟ್ ಮಾಡಿದೆ. ಸರ್ ನಿಮ್ಮನ್ನ ಕರೆಯುತ್ತಾ ಇದ್ದಾರೆ' ಎಂಬ ನರ್ಸ್ ಮಾತಿನಿಂದ ಮತ್ತೆ ವಾಸ್ತವಕ್ಕೆ ಮರಳಿದ ಮಹೇಶ. ಅವನೊಂದಿಗೆ ಗಿರಿಜಮ್ಮ, ಗಂಗಾಧರಯ್ಯ ಅತ್ತ ಧಾವಿಸಿದರು. ಗಿರಿಜಮ್ಮ ಹಾಗೂ ಗಂಗಾಧರಯ್ಯನವರು ಪೂಜಾಳನ್ನು ಪ್ರತ್ಯೇಕವಾಗಿ ಹಾಕಿದ್ದ ಐಸಿಯುಗೆ ಕರೆದುಕೊಂಡು ಹೋದರೆ, ವಿನಾಯಕ ಮಹೇಶನನ್ನು ಕರೆದು ಆಂಜಿಯೊಪ್ಲಾಸ್ಟಿ ನಂತರದ ಪ್ರಿಕಾಷನ್‌ಗಾಗಿ ಏನೇನು ಮಾಡಬೇಕೆಂದು ತಿಳಿಸಲು ಜೊತೆಗೆ ಆತನನ್ನು ಎಕ್ಸ್‌ರೇ ಮಾನಿಟರ್ ಇರುವ ರೂಮಿಗೆ ಕರೆದುಕೊಂಡು ಹೋಗಿ, 'ಮಹೀ ದೇವರು ದೊಡ್ಡವನು, ಸದ್ಯಕ್ಕಂತೂ ಯಾವುದೇ ಅಪಾಯವಿಲ್ಲದೆ ಸ್ಟಂಟ್ ಅಳವಡಿಸಿದ್ದೀನಿ. ಕರೊನರಿ ಆರ್ಟರಿಯಲ್ಲಿ ಬ್ಲಾಕೇಜ್ ಕ್ಲಿಯರ್ ಆಗಿ ಬ್ಲಡ್ ಸರ್ಕ್ಯುಲೇಷನ್ ಸರಿಯಾಗಿ ಆಗ್ತಾ ಇದೆ ನೋಡು' ಎಂದು ಮಾನಿಟರ್‌ನಲ್ಲಿ ಬ್ಲಾಕ್ ಆಗಿದ್ದ ಬ್ಲಡ್ ಸರಾಗವಾಗಿ ಸಂಚಾರವಾಗುತ್ತಿರುವುದನ್ನು ತೋರಿಸುತ್ತ ಹೇಳಿದ. ಹಾಗೆಯೇ ತನ್ನ ಮಾತನ್ನು ಮುಂದುವರೆಸುತ್ತಾ ಹಾಗೆಂದ ಮಾತ್ರಕ್ಕೆ ನಾವು ಪೂರ್ಣ ರಿಸ್ಕ್‌ನಿಂದ ಹೊರಗೆ ಬಂದಿಲ್ಲ. ಎಲ್ಲ ಪ್ರಿಕಾಷನ್ ತೆಗೆದುಕೊಂಡಿದ್ದೀನಿ. ಆದರೂ ಹನ್ನೆರಡು ಗಂಟೆ ಅಬ್ಸರ್‌ವೇಷನ್‌ನಲ್ಲಿ ಇರಬೇಕಾಗುತ್ತೆ. ದಿಸ್ ಪೀರಿಯಡ್ ಈಸ್ ವೆರಿ ಕ್ರೂಷಿಯಲ್ ಟು ಅಸ್. ಡೋಂಟ್ ವರಿ, ದೇವರಿದ್ದಾನೆ' ಎಂದ.

'ವಿನೂ ನಿನಗೆ ಹೇಗೆ ಥ್ಯಾಂಕ್ಸ್ ಹೇಳಲಿ' ಎಂದು ಆತನ ಎರಡು ಕೈಗಳನ್ನು ತೆಗೆದುಕೊಂಡು ತನ್ನ ಹಣೆಗೆ ಒತ್ತಿಕೊಂಡ.

'ನೋಡು, ಪೂಜಾ ನಿನಗೆ ಮುದ್ದಿನ ಮಡದಿಯಾದರೆ ನನಗೆ ಪ್ರೀತಿಯ ತಂಗಿ ಕಣೋ...' ಎಂದು ಮಹೇಶನಿಗೆ ಪೂಜಾಳನ್ನು ನೋಡಲು ಕಳಿಸಿ ತಾನು ಮತ್ತೆ ಆಪರೇಷನ್ ರೂಮಿನತ್ತ ನಡೆದನು.

***

ಐಸಿಯುಗೆ ಬಂದ ಮಹೇಶ ಪೂಜಾ ಬೆಡ್ ಹತ್ತಿರ ನಿಂತು ಅವಳನ್ನು ನೋಡಿದಾಗ ಅವಳು ಇನ್ನೂ ಬಳಲಿಕೆಯ ಭಾವದಲ್ಲಿಯೇ ಇದ್ದಳು. ಅಲ್ಲಿ ಗಿರಿಜಮ್ಮ ಹಾಗೂ ಗಂಗಾಧರಯ್ಯ ಬೆಡ್ ಪಕ್ಕದಲ್ಲಿಯೇ ನಿಂತು ಪೂಜಾಳನ್ನು ನೋಡುತ್ತಿದ್ದರು. ಒಬ್ಬ ನರ್ಸ್ ಕೂಡಾ ಅವಳ ಅಬ್ಸರ್‌ವೇಷನ್‌ಗಾಗಿ ಅಲ್ಲಿಯೇ ಕುಳಿತಿದ್ದಳು. ಐದ್ಹತ್ತು ನಿಮಿಷಗಳ ನಂತರ ಅಲ್ಲಿಗೆ ವಿನಾಯಕ ಬಂದಾಗ ನರ್ಸ್ ಮೇಲೆ ಎದ್ದು ಪಕ್ಕಕ್ಕೆ ಬಂದು ನಿಂತಳು. ವಿನಾಯಕ 'ಮಹೀ, ಪೋಸ್ಟ್ ಆಪರೇಷನ್ ನಂತರ ನೋವಿನಿಂದ ಸ್ವಲ್ಪ ಹೊತ್ತು ಸುಸ್ತು ಇದ್ದೇ ಇರುತ್ತೆ. ಎಚ್ಚರಾದ ನಂತರ ಮಾತಾಡಬಹುದು. ಈಗ ಡಿಸ್ಟರ್ಬ್ ಮಾಡುವುದು ಬೇಡ. ಅವಳಿಗೆ ವಿಶ್ರಾಂತಿ ಬೇಕು' ಎಂದ.

'ಹಾಗಿದ್ದರೆ ಇಲ್ಲಿಯೇ ಹೊರಗೆ ಇದ್ದು ಕಾಯೋಣವಂತೆ. ಎಚ್ಚರಾದ ನಂತರ ಮಾತನಾಡಿಸೋಣ' ಎಂದ ಮಹೇಶ.

ನರ್ಸ್ ಒಬ್ಬಳನ್ನು ಬಿಟ್ಟು ಎಲ್ಲರೂ ಐಸಿಯುನಿಂದ ಹೊರಗೆ ಬಂದರು.

'ದೊಡ್ಡಪ್ಪ, ಅತ್ತೆ, ನೀವು ಮನೆಗೆ ಹೋಗಿ ಬನ್ನಿ. ಅಥರ್ವನನ್ನು ನೋಡಿಕೊಂಡು ಬಂದ ಹಾಗೆ ಆಗುತ್ತೆ. ಮಹೀ ನೀನು ಸ್ವಲ್ಪ ಹೊತ್ತು ನನ್ನ ಚೇಂಬರಿನಲ್ಲಿ ಕೂತಿರು' ಎಂದನು.

'ಬೇಡ ಕಣೊ, ನೋಡೋಣ ನಾನು ಇಲ್ಲಿಯೇ ಹೊರಗೆ ಪೂಜಾಳನ್ನು ನೋಡ್ತಾ ಇರ್ತೀನಿ. ಅವಳಿಗೆ ಪೂರ್ತಿ ಕಾನ್‌ಷಿಯಸ್ ಬಂದಾಗ ಮಾತನಾಡಿಸುವೆ'.

'ನಿನಗೆ ಸಮಾಧಾನ ಎಂದಾದರೆ ಹಾಗೆಯೇ ಮಾಡು. ದೊಡ್ಡಪ್ಪ–ಅತ್ತೆ ನೀವಿಬ್ಬರೂ ಹೋಗಿ ಬನ್ನಿ' ಎಂದು ವಿನಾಯಕ ಅವರಿಬ್ಬರನ್ನೂ ಮನೆಗೆ ಹೋಗಲು ಹೇಳಿದಾಗ ಅವರು ಆಗಲಿ ಎಂದು ಹೊರಗೆ ನಡೆದರು. ತಾನೂ ರೌಂಡ್ಸ್ ಮುಗಿಸಿ ಬೇಗ ಬರುವನೆಂದು ಮಹೇಶನಿಗೆ ಹೇಳಿ ಹೊರಟಾಗ ಮಹೇಶ ಐ.ಸಿ.ಯು ರೂಮಿನ ಗ್ಲಾಸ್ ಡೋರಿನ ಪಕ್ಕದ ಚೇರ್ ಮೇಲೆ ಕೂತು ಗ್ಲಾಸ್‌ನಿಂದಲೇ ಪೂಜಾಳನ್ನು ನೋಡುತ್ತಾ ಕುಳಿತನು.

ಅರ್ಧ ಗಂಟೆಯ ನಂತರ ಪೂಜಾಳಿಗೆ ಪೂರ್ತಿ ಕಾನ್ಷಿಯಸ್ ಬಂದಾಗ ನರ್ಸ್ ಬಂದು ಒಳಗೆ ಬರಲು ಹೇಳಿದಾಗ ಮಹೇಶ ಪೂಜಾಳ ಪಕ್ಕದಲ್ಲಿ ಕೂತು 'ಈಗ ಹೇಗಿದ್ದಿಯಾ ಪೂಜಾ? ನೋವು ಇಲ್ಲ ತಾನೆ?' ಎಂದ.

'ಸ್ವಲ್ಪ ಆರಾಮ ಅನಿಸುತ್ತೆ ರೀ. ಆದರೆ ಇನ್ನೂ ನೋವು ಇದೆ. ಎಲ್ಲಿ ವಿನೂ ಅಣ್ಣ... ಅಪ್ಪ... ಅತ್ತೆ...?'

'ಅಮ್ಮ, ಮಾವ ಮನೆಗೆ ಹೋದ್ರು. ವಿನೂ ರೌಂಡ್ಸ್‌ಗೆ ಹೋಗಿದ್ದಾನೆ' ಎನ್ನುತ್ತಾ ಅವಳ ಕೈಯನ್ನು ನೀವುತ್ತಾ ಕುಳಿತನು.

ಸ್ವಲ್ಪ ಸಮಯದ ನಂತರ ಅಲ್ಲಿಗೆ ಬಂದ ವಿನಾಯಕ 'ಪೂಜಾ, ಹೇಗಿದ್ದೀಯಮ್ಮಾ...?' ಎನ್ನುತ್ತಾ ಅವಳ ಕೈಯನ್ನು ಹಿಡಿದು ಪಲ್ಸ್ ನೋಡುತ್ತಾ ಅವಳ ಪಕ್ಕದಲ್ಲಿ ಕುಳಿತಾಗ, 'ಅಣ್ಣಾ ನನಗೇನು ಆಗೂದಿಲ್ಲ ತಾನೇ...? ಆರಾಮ ಆಗುತ್ತೇನಲ್ಲ...?' ಎಂದು ಪ್ರಶ್ನಿಸಿದಳು.

'ಅಯ್ಯೋ ಹುಚ್ಚು ಹುಡುಗಿ, ನಿನಗೇನು ಆಗಲ್ಲಮ್ಮ, ಫಸ್ಟ್ ಕ್ಲಾಸ್ ಇದ್ದಿಯಾ. ನಾಳೆನೆ ನೀನು ಮತ್ತೆ ಅಥರ್ವನನ್ನು ಆಡಿಸಬಹುದು ಗೊತ್ತಾ?' ಎಂದು ಅವಳಿಗೆ ಧೈರ್ಯ ಹೇಳುತ್ತಾ ಮಹೇಶ ಜೊತೆ ಮಾತನಾಡುತ್ತಾ ಕುಳಿತನು. ನಂತರ ಕೆಲ ಸಮಯದ ಬಳಿಕ ಆತ ಹೊರ ಹೋದಾಗ ಮಹೇಶ ಅವಳಿಗೆ ಮತ್ತೆ ಪ್ರೀತಿಯ ಮಾತುಗಳಿಂದ ಸಾಂತ್ವನ ಹೇಳುತ್ತಾ ಕುಳಿತನು.

## ನಡು ಮಧ್ಯಾಹ್ನ 12 ಗಂಟೆ

ಪೂಜಾಳ ಪಕ್ಕದಲ್ಲಿಯೇ ಅವಳ ಕೈಯನ್ನು ಹಿಡಿದು ಮಹೇಶ ಅವಳನ್ನೇ ತದೇಕಚಿತ್ತದಿಂದ ನೋಡುತ್ತ ಕುಳಿತಿದ್ದನು. ಅವಳು ನಿದ್ರೆಗೆ ಜಾರಿದ್ದರಿಂದ ಆತ ಮಾತನಾಡಿಸದೆ ಇದ್ದನು. ಅವಳ ಸೋತ ಮುಖ ನೋಡುವುದೇ ಅವನಿಗೆ ಜೀವ ಹಿಂಡುವ ವಿಷಯವಾಗಿತ್ತು. ಅವಳು ಯಾವತ್ತೂ ಮುಖ ಸಪ್ಪೆ ಮಾಡಿಕೊಂಡು ಕುಳಿತವಳಲ್ಲ. ಸದಾ ಲವಲವಿಕೆಯಿಂದ ಬೇರೆಯವರನ್ನೂ ನಗಿಸುತ್ತ ತಾನೂ ನಗುತ್ತಾ ಜೀವನದ ಎಂತಹ ಕ್ಷಣಗಳನ್ನೂ ಸಹನೀಯಗೊಳಿಸಿ ಸುಮಧುರವಾಗಿಸುವವಳು. ಮನೆಯ ಮುಂದಿನ ಅಂಗಳವೆಲ್ಲ ಅವಳು ಅತ್ಯಾಸಕ್ತಿಯಿಂದ ಹಚ್ಚಿದ ವಿವಿಧ ಹೂಗಿಡಗಳಿಂದ ಅದು ಹೂವಿನ ತೋಟದಂತೆ ಕಂಗೊಳಿಸುತ್ತಿತ್ತು. ಸ್ವಲ್ಪ ಬಿಡುವಾದರೂ ಹೊಸದಾಗಿ ಹೂವಿನ ಗಿಡಗಳನ್ನು ನೆಡುತ್ತಿದ್ದಳು. ಪಾದರಸದಂತೆ ಚುರುಕಾಗಿ ಮನೆ ಕೆಲಸ ಮಾಡಿದ ನಂತರ ಮತ್ತೆ ಬೇರೆ ಕೆಲಸಗಳು ಏನು ಇವೆ ಎಂದು ಹುಡುಕಾಡಿ ಅವುಗಳತ್ತ ಮುಖ ಮಾಡುತ್ತಿದ್ದಳು.

ಸಂಸಾರದಲ್ಲಿ ಸಣ್ಣ ಜಗಳ, ಮುನಿಸು. ಕೋಪ, ತಾಪ ಸಹಜವೇ. ಅವಳೂ ಅವುಗಳಿಗೆ ಹೊರತಲ್ಲ. ಆದರೆ ಮುನಿಸು, ಕೋಪಗಳೆನಿದ್ದರೂ ಕೆಲವೇ ಗಂಟೆಗಳದ್ದು ಅಷ್ಟೇ. ನಂತರ ಮತ್ತೆ ನಗುತ್ತಾ ಬದುಕಿಗೆ ಹೊಸ ಅರ್ಥ ಕೊಟ್ಟು ಚೇತೋಹಾರಿಗೊಳಿಸುತ್ತಿದ್ದಳು. ಅಂತಹ ಚೇತನಾಶಕ್ತಿ ಇಂದು ಬೆಡ್ ಮೇಲೆ ಈ ರೀತಿ ಮೌನವಾಗಿ ಮಲಗಿರುವುದನ್ನು ಕಂಡು ಅವನಿಗೆ ಎದೆಯಲ್ಲಿ ಜ್ವಾಲೆ ಇಟ್ಟಂತಾಗಿತ್ತು. ಜೊತೆಗೆ, ಹನ್ನೆರಡು ತಾಸು ರಿಸ್ಕ್ ಇರುವಂತಹದ್ದೇ ಎಂಬ ವಿನಾಯಕನ ಮಾತು ಅವನಿಗೆ ಈ ಹನ್ನೆರಡು ಗಂಟೆಗಳ ಪ್ರತಿ ಕ್ಷಣಗಳನ್ನು ಕಳೆಯುವುದು ಯಾತನಾಮಯವಾಗಿತ್ತು.